ಪರಿಶಿಷ್ಟ ಜಾತಿಯವರಿಗಾಗಿ ಸರ್ಕಾರಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು.

೨೭ ಸರ್ಕಾರಿ ಗಂಡು ಮಕ್ಕಳ ವಿದ್ಯಾರ್ಥಿನಿಲಯಗಳು ,

		ಮಂಜೆದೆ ಬೆಳ್ತಂಗಡಿ ತಾಲ್ಲೂಕು.	೪೫	೪೫
೨೮	–,,–	ಬೆಳ್ತಂಗಡಿ ಬೆಳ್ತಂಗಡಿ ತಾಲ್ಲೂಕು	೭೨	೭೨
೨೯	–,,–	ಬಾಲಿಲಾ ಸೂಳ್ಯ ತಾಲ್ಲೂಕು	೨೫	೨೫
೩೦	–,,–	ಕಾಪು. ಬಂಟ್ವಾಳ ತಾಲ್ಲೂಕು, ಅದ್ಯಂಕಾ	೨೫	೨೫
೩೧	–,,–	ಶಂಕರನಾರಾಯಣ, ಕುಂದಾಪುರ ತಾಲ್ಲೂಕು	೫೦	೪೫
೩೨	–, –	ಪಾಳ್ಯತಡಕಾ, ಭಂಟಕಾಳ್, ತಾಲ್ಲೂಕು:	೨೫	೨೫
೩೩	–,.–	ವಿಠಲ. ಭಂಟ್‌ಕಲ್ ತಾಲ್ಲೂಕು	೭೫	೭೪
೩೪	–, –	ಅಜ್ಜಕೆರೆ, ಕಾರ್ಕಳ ತಾಲ್ಲೂಕು	೫೦	೨೫
			೧೮೨೩	೧೬೭೩

II-ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯುಂಗಳಂ :

೧	ಸರ್ಕಾರಿ ಗಂಡು ಮಕ್ಕಳ ಕಾಲೇಜು ಹಾಸ್ಟೆಲ್, ಮಂಗಳೂರು,	೪೦	೪೦
	ಒಟ್ಟು	೧೮೬೩	೧೭೧೩

ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಆಹಾರ ದಿನಸಿ ವಿತರಣೆ

ಶ್ರೀ ಎ. ಕೃಷ್ಣಪ್ಪ, (ಪರ್ಯಾರು). —ಮಾನ್ಯ ಸಾರಿಗೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದಿನಾಂಕ ೧–೧ ರಿಂದ ೧–೩–೮೯ರ ವರೆವಿಗೆ ಬೆಂಗಳೂರು ಉತ್ತರ ತಾಲ್ಲೂಕಿಗೆ ಆಹಾರ್ನ ದಿನಸಿ ಬಂದಿರುವ ಅಲಾಟ್‌ಮೆಂಟ್ ಎಷ್ಟು ?

ಆ) ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿರುವ ಪಡಿತರ ಚೀಟಿಗೆ ಎಷ್ಟು ಆಹಾರ ದಿನಸಿಯನ್ನು ಮೇಲ್ಕಂಡ ಅವಧಿಯಲ್ಲಿ ವಿತರಣೆ ಮಾಡಲಾಗಿದೆ ?

ಇ) ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಹಸಿರು ಮತ್ತು ಕೇಸರಿ ಪಡಿತರ ಚೀಟಿಗಳು ಎಷ್ಟಿರುತ್ತವೆ.

ಈ) ಈ ಪಡಿತರ ಚೀಟಿಯವರಿಗೆ ಯಾವ ವರ್ಗದ ಅಕ್ಕಿಯನ್ನು ಈ ದಿನಾಂಕದಿಂದ ಅಂದರೆ ೧–೧–೮೯ರಿಂದ ೧–೩–೮೯ರ ವರೆವಿಗೆ ವಿತರಣೆ ಮಾಡಲಾಗಿದೆ ?

ಶ್ರೀ ಪಿ.ಜಿ. ಆರ್.ಸಿಂಧ್ಯ (ಸಾರಿಗೆ ಮಂತ್ರಿಗಳು), —

ಅ) ಬೆಂಗಳೂರು ಉತ್ತರ ತಾಲ್ಲೂಕಿಗೆ ದಿನಾಂಕ ೧–೧–೮೯ ರಿಂದ ೧-೩–೮೯ರ ವರೆವಿಗೆ ಅಂದರೆ ೨ ತಿಂಗಳಿಗೆ ಈ ಕೆಳಕಂಡಂತೆ ಅಕ್ಕಿ ಮತ್ತು ಗೋದಿಯನ್ನು ಕಾರ್ಡುದಾರರಿಗೆ ವಿತರಿಸಲು ಬಿಡುಗಡೆ ಮಾಡಿರುತ್ತಾರೆ.

(ಮೆಟ್ರಿಕ್ ಟನ್ನುಗಳಲ್ಲಿ)

ಅಕ್ಕಿ	ಗೋಧಿ
೮೬೨.೨	೨೫೨.೮

ಆ) ಹಸಿರು ಪಡಿತರ ಚೀಟಿದಾರರಿಗೆ ಮೇಲ್ಕಂಡ ಅವಧಿಯಲ್ಲಿ ಪ್ರತಿ ತಿಂಗಳು ಪ್ರತೀ ಕಾರ್ಡಿಗೆ ೬ ಕೆ.ಜಿ. ಅಕ್ಕಿ ಮತ್ತು ೪ ಕೆ.ಜಿ. ಗೋದಿ ಹಾಗೂ ಕೇಸರಿ ಪಡಿತರ ಚೀಟಿದಾರರಿಗೆ ಮೇಲ್ಕಂಡ ಅವಧಿಯಲ್ಲಿ ಪ್ರತಿ ತಿಂಗಳೂ ಪ್ರತಿ ಕಾರ್ಡಿಗೆ ೬ ಕೆ.ಜಿ. ಅಕ್ಕಿಯನ್ನು ವಿತರಿಸಲಾಗಿದೆ ಯಲಹಂಕ ಪಟ್ಟಣ ಪ್ರದೇಶದಲ್ಲಿ ಆ ಅವಧಿಗೆ ಪ್ರತಿ ತಿಂಗಳೂ ಪ್ರತಿ ಕಾರ್ಡಿಗೆ ೧೦ ಕೆ.ಜಿ. ಅಕ್ಕಿಯಂತೆ ವಿತರಿಸಲಾಗಿದೆ.

ಇ) ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಈ ಕೆಳಕಂಡಂತೆ ಹಸಿರು ಮತ್ತು ಕೇಸರಿ ಪಡಿತರ ಚೀಟಿಗಳು ಇರುತ್ತವೆ.—

ಹಸಿರು ಪಡಿತರ ಚೀಟಿ	೨೯೧೨೮
ಕೇಸರಿ ಪಡಿತರ ಚೀಟಿ	೩೬೯೫೫

ಈ) ಅವಧಿಯಲ್ಲಿ ಕಾರ್ಡುದಾರರಿಗೆ ಹೆಚ್ಚಾಗಿ ಅಶ್ಕುತ್ತಮ ದರ್ಜೆಯ ಅಕ್ಕಿಯನ್ನು ಭಾರತ ಆಹಾರ ನಿಗಮ ಬಿಡುಗಡೆ ಮಾಡಿರುತ್ತೆ.

ಬೆಳ್ತಂಗಡಿ ಮೂಲಕ ಹೋಗುವ ತಡೆರಹಿತ ಬಸ್ಸುಗಳು.

೯೦೮. ಶ್ರೀ ಕೆ. ವಸಂತಬಂಗೇರ (ಬೆಳ್ತಂಗಡಿ).— ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳ್ತಂಗಡಿ ತಾಲ್ಲೂಕು ಕೇಂದ್ರವಾಗಿದ್ದು ಕೆಲವು ತಡರಹಿತ ಸರ್ಕಾರಿ ಬಸ್ಸುಗಳು ಕೆಲವು ಸಂದರ್ಭಗಳಲ್ಲಿ 'ಕೇಳಿಕೆಯ ತಂಗುವಿಕೆ' ನೆಲೆಯಲ್ಲಿ ಬಸ್ಸು ನಿಲ್ದಾಣದೊಳಗೆ ಬಾರದೆ ನೇರವಾಗಿ ಹೋಗುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಇದರಿಂದಾಗಿ ಪ್ರಯಾಣಿಕರಿಗಾಗುವ ತೊಂದರೆಯನ್ನು ನಿವಾರಿಸಲು ಅಂತಹ ಬಸ್ಸುಗಳು ನಿಂತು ಮುಂದೆ ಹೋಗುವ ವ್ಯವಸ್ಥೆ ಕಲ್ಪಿಸುವುದೇ?

ಶ್ರೀ ಸಿದ್ದರಾಮಯ್ಯ (ಸಾರಿಗೆ ಮಂತ್ರಿಗಳು).—

ಅ) ಬಂದಿದೆ.

ಆ) ಈ ತೊಂದರೆ ನಿವಾರಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಕೋಲಾರ ಜಿಲ್ಲೆಯಲ್ಲಿ ವಿದ್ಯಾರ್ಥಿವೇತನದ ದುರುಪಯೋಗದ ಬಗ್ಗೆ

೮೭೧. ಶ್ರೀ ಆರ್. ವೆಂಕಟರಾಮಯ್ಯ (ಮುಳುಬಾಗಿಲು).— ಮಾನ್ಯ ಸಮಾಜ ಕಲ್ಯಾಣ ಮಂತ್ರಿ ಜನ ಸೇವಾ ಮತ್ತು ಕ್ರೀಡಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೋಲಾರ ಜಿಲ್ಲೆಯಲ್ಲಿ ೧೯೮೭–೮೮ನೇ ಸಾಲಿನಲ್ಲಿ ಎಸ್.ಸಿ. ಎಸ್.ಟಿ. ವಿದ್ಯಾರ್ಥಿಗಳಿಗೆ ಮಂಜೂರಾಗಿದ್ದ ಭಾರತ ಸರ್ಕಾರದ ವಿದ್ಯಾರ್ಥಿವೇತನ ಹಲವಾರು ಶಾಲಾ ಕಾಲೇಜುಗಳಿಗೆ ಪಾವತಿಯಾಗದ ದುರುಪಯೋಗವಾಗಿರುವುದು. ನಿಜವೇ?

ಆ) ಹಾಗಿದ್ದಲ್ಲಿ, ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ, ದುರುಪಯೋಗಕ್ಕೆ ಕಾರಣರಾರು?

ಶ್ರೀ ಬಿ.ಜಿ.ಆರ್. ಸಿದ್ಧಯ್ಯ (ಸಮಾಜ ಕಲ್ಯಾಣ ಸಚಿವರು).—

ಅ) ಹೌದು,

ಆ) ವಿದ್ಯಾರ್ಥಿ ವೇತನದ ದುರುಪಯೋಗಕ್ಕೆ ಕಾರಣರಾಗಿದ್ದವರನ್ನು ಅಮಾನತ್ತಿನಲ್ಲಿಟ್ಟು ಆದೇಶ ಹೊರಡಿಸಲಾಗಿದೆ. ತನಿಖೆಗಾಗಿ ಸಿ.ಓ ಡಿ.ಗೆ ವಹಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.